ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ : ಕಾಶಿಇ/ಶೈವಿ/04/ಸುತ್ತೋಲೆ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿ ರಸ್ತೆ, ಬೆಂಗಳೂರು – 560001.
ದಿನಾಂಕ : 10.06.2022.

**ಸುತ್ತೋಲೆ**

**ವಿಷಯ :** ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವಿದ್ಯಾರ್ಥಿಗಳಿಗೆ Unacademy ಸಂಸ್ಥೆಯವರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗೊಳಿಸುವ ಸಂಬಂಧವಾಗಿ VC ಯನ್ನು ಹಮ್ಮಿಕೊಂಡಿರುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯು, ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗೊಳಿಸಲು UNACADEMY ಸಂಸ್ಥೆಯೊಂದಿಗೆ 2021-22 ಸಾಲಿನಿಂದ ಒಡಂಬಡಿಕೆ (MoU) ಮಾಡಿಕೊಂಡಿರುತ್ತದೆ. ಅದರಂತೆ UNACADEMY ಸಂಸ್ಥೆಯು ಜೂನ್/ಜುಲೈ2022 ರಲ್ಲಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ವಿದ್ಯಾರ್ಥಿಗಳಿಗೆ **ಆನ್ಲೈನ್ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಸದರಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡುವ 3250 ಟಾಪ್ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು, ಉಚಿತವಾಗಿ ಆನ್ಲೈನ್ ಮೂಲಕ ತರಬೇತಿ ನೀಡಲಿದ್ದಾರೆ.**

ಈ ಕೆಳಕಂಡ ಪರೀಕ್ಷೆಗಳಿಗೆ ಒಂದು ವರ್ಷದ ಕೋರ್ಸ್‌ಗೆ ಆನ್ಲೈನ್ ತರಬೇತಿಯನ್ನು ನೀಡಲಿದ್ದು, ಆಯ್ಕೆಯಾದ ವಿದ್ಯಾರ್ಥಿಗಳು ತಮ್ಮ ಇಚ್ಛಾನುಸಾರ ಯಾವುದಾದರೂ ಒಂದು ಪರೀಕ್ಷೆಗೆ ತರಬೇತಿ ಪಡೆಯಬಹುದಾಗಿರುತ್ತದೆ.

- UPSC
- KPSC
- Banking
- Defence
- RBI Recruitment
- NABARD Recruitment
- Staff Selection Commission(SSC)

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರ ಸಮ್ಮುಖದಲ್ಲಿ UNACADEMY ಸಂಸ್ಥೆಯವರು ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ನ ಪ್ರಾಚಾರ್ಯರು ಹಾಗೂ ಪ್ಲೇಸ್ಮೆಂಟ್ ಅಧಿಕಾರಿಗಳಿಗೆ ಈ ಕೆಳಕಂಡಂತೆ ವೀಡಿಯೋ ಕಾನ್ಫರೆನ್ಸ್ ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ, ಸದರಿ ವೀಡಿಯೋ ಕಾನ್ಫರೆನ್ಸ್ ಗೆ ಪ್ರಾಚಾರ್ಯರುಗಳು ಹಾಗೂ ಪ್ಲೇಸ್ಮೆಂಟ್ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

ವಿಡಿಯೋ ಸಂವಾದದ ಲಿಂಕನ್ನು ಪ್ರಾಂಶುಪಾಲರುಗಳ Whatsapp ಗ್ರೂಪ್‌ಗೆ ಒಂದು ದಿನದ ಮುಂಚಿತವಾಗಿ ಕಳುಹಿಸಲಾಗುವುದು.

| ವಿಭಾಗ | ದಿನಾಂಕ | ಸಮಯ |
|---|---|---|
| ಬೆಂಗಳೂರು ವಿಭಾಗ | 13.06.2022 | 11AM-1PM |
| ಮೈಸೂರು ವಿಭಾಗ | 14.06.2022 | 11AM-1PM |
| ಮಂಗಳೂರು ವಿಭಾಗ | 15.06.2022 | 11AM-1PM |
| ಕಲಬುರಗಿ ವಿಭಾಗ | 16.06.2022 | 11AM-1PM |
| ಧಾರವಾಡ ವಿಭಾಗ | 17.06.2022 | 11AM-1PM |
| ಶಿವಮೊಗ್ಗ ವಿಭಾಗ | 18.06.2022 | 11AM-1PM |

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು

..2..

Scanned with CamScanner